ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ ಸಚಿವರು).—

ಅ) ವಿಜಾಪುರ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾರ್ಯಕ್ರಮದ ಅಂಗವಾಗಿ ಈವರೆವಿಗೆ ೧೧ (ಹನ್ನೊಂದು) ಗೋಶಾಲೆಗಳನ್ನು ಆರಂಭಿಸಲಾಗಿದೆ. ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು		ಆರಂಭಿಸಿರುವ ಗೋಶಾಲೆಗಳ ಸಂಖ್ಯೆ
೧) ವಿಜಾಪುರ	...	೨
೨) ಮಂದ್ವೇಬಿಹಾಳ	...	೧
೩) ಬ.ಬಾಗೇವಾಡಿ	...	೧
೪) ಬಾಗಲಕೋಟಿ	...	೧
೫) ಬಾದಾಮಿ	...	೧
೬) ಹುನಗುಂದ	...	೧
೭) ಜಮಖಂಡಿ	...	೧
೮) ಮುಧೋಳ	...	೧
೯) ಇಂಡಿ	...	೧
೧೦) ಸಿಂದಗಿ	...	೧
	ಒಟ್ಟು	೧೧

ಆ) ಬೀಳಗಿ ತಾಲ್ಲೂಕಿನಲ್ಲಿ ಇಂತಹ ಗೋಶಾಲೆಗಳನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಇ) ಬೀಳಗಿ ತಾಲ್ಲೂಕಿನಲ್ಲಿ ಒಟ್ಟು ೬೫ ಗ್ರಾಮಗಳಿದ್ದು, ಕೃಷ್ಣಾ ಮತ್ತು ಘಟಪ್ರಭಾ ನದಿಗಳು ಈ ತಾಲ್ಲೂಕಿನಲ್ಲಿ ಹರಿಯುತ್ತಿದ್ದು, ಸದರೀ ನದಿಗಳ ದಂಡೆಗುಂಟ ೪೫ ಗ್ರಾಮಗಳು ಇದ್ದು, ಸದ್ಯಕ್ಕೆ ಗೋಶಾಲೆ ಆರಂಭಿಸುವ ಅವಶ್ಯಕತೆ ಕಂಡುಬಂದಿಲ್ಲ. ಇನ್ನು ಮುಂದೆ ಮೇವಿನ ಅಭಾವ ಹೆಚ್ಚಾಗಿ ಕಂಡುಬಂದಲ್ಲಿ ಗೋಶಾಲೆ ಪ್ರಾರಂಭಿಸುವ ಕಾರ್ಯ ಪರಿಶೀಲನೆಯಲ್ಲಿದ್ದು, ಅಗತ್ಯವಾದಲ್ಲಿ ಗೋಶಾಲೆಯನ್ನು ಅನಗವಾಡಿ ಗ್ರಾಮದಲ್ಲಿ ಆರಂಭಿಸಲಾಗುವುದು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪ್ರಾಥಮಿಕ ಬೇಡಿಕೆಗಳ ಪೂರೈಸುವ ಕಾರ್ಯಾಗಾರದ ಬಗ್ಗೆ.

೩೦೮. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ವಿದ್ಯುತ್ ಮತ್ತು ಭೂ ವಿಜ್ಞಾನ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಅದರ ಪ್ರಾಥಮಿಕ ಬೇಡಿಕೆಗಳನ್ನು ಪೂರೈಸಬಲ್ಲ ಕಾರ್ಯಾಗಾರ ಇದೆಯೆ ?

ಆ) ಈ ಕಾರ್ಯಾಗಾರ (ವರ್ಕ್‌ಷಾಪ್) ವಿದ್ಯುಚ್ಛಕ್ತಿ ಮಂಡಳಿಯ ಅವಶ್ಯಕತೆಗಳನ್ನು ಪೂರೈಸಲು ಸಾಮರ್ಥ್ಯ ಇದೆಯೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಕಾರ್ಯಾಗಾರಗಳಿವೆ, ಆದರೆ ಇವು ಪೂರ್ಣವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅವಶ್ಯಕತೆಯನ್ನು ಪೂರ್ಣವಾಗಿ ಪೂರೈಸಲು ಸಾಧ್ಯವಾಗುತ್ತಿಲ್ಲ.

ಆ) ಈ ಕಾರ್ಯಾಗಾರಗಳು ವಿದ್ಯುಚ್ಛಕ್ತಿ ಮಂಡಳಿಯ ಅವಶ್ಯಕತೆಗಳನ್ನು ಪೂರೈಸಲು ಸಾಮರ್ಥ್ಯ ಹೊಂದಿಲ್ಲ ಆದರೆ ಉಕ್ಕಿನ ಸಲಕರಣೆಗಳನ್ನು ಕ್ರಾಸ್ ಆರಮ್, ಕ್ಲಾಂಪ್, ಟವರ್ ಭಾಗಗಳು ಇತ್ಯಾದಿಗಳನ್ನು ಕೊಂಚ ಮಟ್ಟಿಗೆ ತಯಾರು ಮಾಡಿಕೊಡುತ್ತಿವೆ.